**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::719/2014**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಹರೀಶ್ | **PW-8** |
| **ತಂದೆಯ ಹೆಸರು** | : | ನೀಲಕಂಠಪ್ಪ | **CW-9** |
| **ವಯಸ್ಸು** | : | 46 ವರ್ಷ | |
| **ಉದ್ಯೋಗ** | : | ವ್ಯವಸಾಯ | |
| **ವಾಸಸ್ಥಳ** | : | ಬಗ್ಗವಳ್ಳಿ. | |

**ದಿನಾಂಕಃ30-01-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ನಮ್ಮ ಊರಿನ ಶ್ರೀ ಚನ್ನಕೇಶವ ಯೋಗ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ 2013 ರಲ್ಲಿ ಕಳ್ಳತನವಾಗಿರುತ್ತದೆ ಅದನ್ನು ಹೊರತುಪಡಿಸಿ ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: ಮಾನ್ಯ A P P ರವರಿಂದ ::**

ದಿನಾಂಕ 06.07.2013 ರಂದು ನಾನು ನಮ್ಮ ಮನೆಯಲ್ಲಿ ಇದ್ದ ಸಮಯದಲ್ಲಿ ನಮ್ಮ ಊರಿನ ಜನಗಳು ಶ್ರೀ ಚನ್ನಕೇಶವ ಯೋಗ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಕಳ್ಳತನ ವಾಗಿರುವ ಬಗ್ಗೆ ಮಾತನಾಡುತ್ತಿದು ನಾನು ಆ ದಿನ ಮಧ್ಯಾಹ್ನ 12.00 ಗಂಟೆಗೆ ದೇವಸ್ಥನದ ಬಳಿ ಹೋಗಿ ನೋಡಲಾಗಿ ಯಾರೋ ಕಳ್ಳರು ದೇವಸ್ಥಾನದ ಮುಂಬಾಗಿಲಿನ ಬೀಗವನ್ನು ಮುರಿದು ಒಳಗೆ ಪ್ರವೇಶ ಮಾಡಿ ಗಾಡ್ರೆಜ್ ಬೀರುವನ್ನು ತೆಗೆದು ಗರ್ಭ ಗುಡಿಯ ಒಳಗೆ ಹೋಗಿ ದೇವಿಯ ಕುತ್ತಿಗೆಯಲ್ಲಿ ಇದ್ದ ಬೆಳ್ಳಿಯ ಕರಿಮಣಿ ಸರ, ಚಿನ್ನದ ತಾಳಿ, ಗುಂಡುಗಳು, ಕಿವಿಯ ಕವಚಗಳು, ಕಳ್ಳತನ ಮಾಡಿರುತ್ತಾರೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ 06.07.2013 ರಂದು ಪೊಲೀಸರಿಗೆ "ನಾನು ಮೇಲ್ಕಂಡ ವಿಳಾಸದಲ್ಲಿ... ... . ಗುಮಾನಿ ಇರುವುದಿಲ್ಲ" ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಆ

ಭಾಗವನ್ನು ನಿಪಿ10 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿತರ ವಕೀಲರಿಂದ ::**

**( ಪಾಟೀ ಸವಾಲು ಇರುವುದಿಲ್ಲ)**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::